# ನಿವೇದನೆ

ತನ್ನ ಗಳಿಕೆಯನ್ನು ಮೀರಿದ ಬದುಕನ್ನು ಅಪೇಕ್ಷೆಪಡುವವರು, ಅದಕ್ಕಾಗಿ ಸಾಲ ಮಾಡುವುದು ಆಧುನಿಕ ಜೀವನಶೈಲಿಯಲ್ಲಿ ಅತ್ಯಂತ ಸಹಜವಾದ ಪ್ರಕ್ರಿಯೆ ಎನ್ನುವಂತಾಗಿದೆ. ಆದರೆ ಜೀವನದ ಉದ್ದೇಶವೇ ದುಡ್ಡು ಗಳಿಸುವುದು ಎನ್ನುವ ನಂಬಿಕೆ ದುರಂತಗಳಿಗೆ ಎಡೆಮಾಡಿಕೊಡುತ್ತದೆ.

## ಅಂಕಿಗಳ ಮೀರಿದ ಬದುಕಿನ ಗಣಿತ

ಬೆಳೆಹಾನಿ ಹಾಗೂ ಸಾಲದ ಹೊರೆಯಿಂದಾಗಿ ನೇಣು ಹಾಕಿಕೊಳ್ಳುವ ಹಾಗೂ ಕೀಟನಾಶಕಗಳನ್ನು ಸೇವಿಸುವ ರೈತರ ದುರಂತ ಕಥನಗಳು ಈಚಿನ ದಿನಗಳಲ್ಲಿ ಸಾಮಾನ್ಯ ಎನ್ನುವಂತಾಗಿವೆ. ಇದರ ಜೊತೆಗೆ, ಆರ್ಥಿಕ ನಿರ್ವಹಣೆಗೆ ಸಂಬಂಧಿಸಿದ ತಪ್ಪು ಲೆಕ್ಕಾಚಾರಗಳಿಂದಾಗಿ ಆತ್ಮಹತ್ಯೆಗೆ ಶರಣಾಗುವ ಆತಂಕಕಾರಿ ಪ್ರವೃತ್ತಿಯೂ ಈಚಿನ ದಿನಗಳಲ್ಲಿ ಹೆಚ್ಚುತ್ತಿರುವಂತಿದೆ. ಇತ್ತೀಚೆಗೆ ಬೆಂಗಳೂರಿನ ಚಾಮುಂಡಿನಗರದಲ್ಲಿ ಕುಟುಂಬವೊಂದು ಸಾಮೂಹಿಕ ಆತ್ಮಹತ್ಯೆ ಪ್ರಯತ್ನ ನಡೆಸಿದ್ದು ಹಾಗೂ ಮೂರು ವರ್ಷದ ಮಗಳನ್ನು ಕೊಂದು ತಾನೂ ಆತ್ಮಹತ್ಯೆ ಮಾಡಿಕೊಂಡ ಮಂಡ್ಯ ಜಿಲ್ಲೆಯ ವ್ಯಕ್ತಿಯೊಬ್ಬನ ಪ್ರಕರಣಗಳನ್ನು ಈ ನಿಟ್ಟಿನಲ್ಲಿ ಗಮನಿಸಬಹುದು. ಈ ಎರಡೂ ಕುಟುಂಬಗಳ ದುರಂತಕ್ಕೆ ಕಾರಣ ಅವರ ಹಣಕಾಸಿನ ಬಿಕ್ಕಟ್ಟು ಹಾಗೂ ದುರ್ಬಲ ಮನಸ್ಥಿತಿ. ಒಂದು ಕುಟುಂಬ ಚೀಟಿ ವ್ಯವಹಾರದಲ್ಲಿ ಸಿಕ್ಕಿ ನಷ್ಟ ಅನುಭವಿಸಿದ್ದರೆ, ಮತ್ತೊಂದು ಕುಟುಂಬ ಸಾಲದ ಸುಳಿಯಲ್ಲಿ ಸಿಲುಕಿ ಕಂಗೆಟ್ಟಿದೆ. ವಿಪರ್ಯಾಸವೆಂದರೆ, ಈ ಎರಡೂ ದುರಂತಗಳಲ್ಲಿ ಬದುಕುಳಿದವರು ಹಣಕಾಸಿನ ಬಿಕ್ಕಟ್ಟಿನ ಜೊತೆಗೆ, ತಮ್ಮ ಕುಟುಂಬದವರ ಅಗಲಿಕೆಯ ದುಃಖ–ಕೊರತೆಯನ್ನೂ ಈಗ ಅನುಭವಿಸಬೇಕಾಗಿದೆ.

ಮಗಳನ್ನು ಕೊಂದು ತಾನೂ ಸಾವಿಗೀಡಾದ ವ್ಯಕ್ತಿಯ ಪ್ರಸಂಗವಂತೂ ಇವತ್ತಿನ ಅನೇಕ ಮಧ್ಯಮ– ಕೆಳಮಧ್ಯಮ ವರ್ಗಗಳ ಬದುಕಿಗೆ ಕನ್ನಡಿಯಂತಿದೆ. ಈ ವ್ಯಕ್ತಿ ಸಾಯುವ ನಿರ್ಧಾರಕ್ಕೆ ಬರುವ ಸಂದರ್ಭದಲ್ಲಿ ಆತನ ಹೆಂಡತಿ ಗರ್ಭಿಣಿಯಾಗಿದ್ದಳು. ಸಾಮಾನ್ಯವಾಗಿ ಮಗುವಿನ ಜನನ ಕುಟುಂಬದಲ್ಲಿ ಸಂತೋಷಕ್ಕೆ ಕಾರಣವಾಗುತ್ತದೆ. ಆದರೆ, ಈ ಕುಟುಂಬದಲ್ಲಿ ಎರಡನೇ ಮಗುವಿನ ಆಗಮನ ಚಿಂತೆಗೆ ಕಾರಣವಾಗಿದೆ. ಹೊಸ ಸದಸ್ಯನ ಸೇರ್ಪಡೆಯಿಂದಾಗಿ ಕುಟುಂಬದ ಆರ್ಥಿಕ ಸ್ಥಿತಿ ಮತ್ತಷ್ಟು ಕೆಡಬಹುದು ಎನ್ನುವ ಲೆಕ್ಕಾಚಾರ ಕೂಡ ಆತನ ಋಣಾತ್ಮಕ ಯೋಚನೆಗೆ ಒಂದು ಕಾರಣವಾಗಿತ್ತು.

ದೇಹದ ಅಂಗಗಳು ಘಾಸಿಗೊಂಡಾಗ ಅವುಗಳ ಪುನಶ್ಚೇತನಕ್ಕೆ ಸಂಬಂಧಿಸಿದಂತೆ ನಮ್ಮಲ್ಲಿ ವೈದ್ಯಕೀಯ ಸೇವೆಗಳಿವೆ. ಅಂತೆಯೇ, ಮಾನಸಿಕವಾಗಿ ಘಾಸಿಗೊಂಡವರಿಗೆ ಸಾಂತ್ವನ ಕೇಂದ್ರಗಳಿವೆ. ಆದರೆ, ಹಣಕಾಸು ನಿರ್ವಹಣೆಗೆ ಸಂಬಂಧಿಸಿದಂತೆ ವ್ಯಕ್ತಿಗಳನ್ನು ತರಬೇತುಗೊಳಿಸುವ ಅವಕಾಶಗಳು ನಮ್ಮಲ್ಲಿ ಇಲ್ಲವೇ ಇಲ್ಲ ಎನ್ನುವಷ್ಟು ಕಡಿಮೆ. ಹೀಗಾಗಿ, ವ್ಯಕ್ತಿ ತನ್ನ ಖಾಸಗಿ ಬದುಕಿನ ತಪ್ಪುಗಳಿಂದಲೇ ಪಾಠ ಕಲಿಯಬೇಕಾದ ಸಂದರ್ಭಗಳು ಹೆಚ್ಚು. ಇಂಥ ಸಂದರ್ಭಗಳು ಕೆಲವೊಮ್ಮೆ ಜೀವನವನ್ನೇ ಬಲಿಕೊಡುವಷ್ಟು ದಾರುಣವಾಗಿರುತ್ತವೆ.

ನಗರೀಕರಣ ಮತ್ತು ಆಧುನಿಕ ಜೀವನಶೈಲಿ ಕೂಡ ವ್ಯಕ್ತಿಯ ಆತ್ಮವಿಶ್ವಾಸವನ್ನು ಹೆಚ್ಚಿಸುವ ಬದಲಿಗೆ ಪೊಳ್ಳುಗೊಳಿಸುತ್ತಿರುವುದನ್ನು ಗಮನಿಸಬಹುದು. ಜೀವನದ ಉದ್ದೇಶವೇ ದುಡ್ಡು ಗಳಿಸುವುದು ಎನ್ನುವ ನಂಬಿಕೆ ಕೂಡ ಇಂಥ ದುರಂತಗಳಿಗೆ ಎಡೆಮಾಡಿಕೊಡುತ್ತದೆ. ತನ್ನ ಗಳಿಕೆಯನ್ನು ಮೀರಿದ ಬದುಕನ್ನು ಅಪೇಕ್ಷೆಪಡುವವರು, ಅದಕ್ಕಾಗಿ ಸಾಲ ಮಾಡುವುದು ಆಧುನಿಕ ಜೀವನಶೈಲಿಯಲ್ಲಿ ಅತ್ಯಂತ ಸಹಜವಾದ ಪ್ರಕ್ರಿಯೆ ಎನ್ನುವಂತಾಗಿದೆ. 'ಹಾಸಿಗೆ ಇದ್ದಷ್ಟು ಕಾಲು ಚಾಚು' ಎನ್ನುವ ಮಾತು ಬದಲಾದ ಆರ್ಥಿಕ ಪರಿಕಲ್ಪನೆಯಲ್ಲಿ, 'ಕಾಲು ಇದ್ದಷ್ಟು ಹಾಸಿಗೆ ಹೊಲಿಸಿಕೊ' ಎಂದಾಗಿದೆ. ಇದಕ್ಕೆ ತಕ್ಕನಾಗಿ ಸಾಲಗಳನ್ನು ಕೊಡುವ ಸಂಸ್ಥೆಗಳು ಕೂಡ ನಾಯಿಕೊಡೆಗಳಂತೆ ಬೆಳೆದಿವೆ. ತಮ್ಮ ದುಡಿಮೆಯ ಸಾಮರ್ಥ್ಯದ ಕುರಿತ ಅತಿಯಾದ ನಂಬಿಕೆಯಲ್ಲಿ ಸಾಲ ಪಡೆಯುವವರು ನಂತರದ ದಿನಗಳಲ್ಲಿ ಸಾಲದ ಕಂತುಗಳನ್ನು ತೀರಿಸಲಾಗದೆ ಹೈರಾಣಾಗುತ್ತಾರೆ. ಬೇರೆ ಬೇರೆ ಕಾರಣಗಳಿಗಾಗಿ ಸಾಲ ಪಡೆದವರು, ಮಾಸಿಕ ಕಂತುಗಳನ್ನು ಕಟ್ಟುವ ಕಸರತ್ತಿನಲ್ಲೇ ತಮ್ಮ ಯೌವನವನ್ನು ನೀಗಿಕೊಳ್ಳುವುದಿದೆ. ಯಾರೋ ಕೆಲವರು ಮಾತ್ರ, ತಮ್ಮ ಪ್ರತಿಭೆ–ಸಾಮರ್ಥ್ಯಕ್ಕೆ ತಕ್ಕಂತೆ ಬದುಕನ್ನು ಸುಂದರವಾಗಿ ರೂಪಿಸಿಕೊಳ್ಳುತ್ತಾರೆ.

'ಬದುಕುವ ಕಲೆ'ಯನ್ನು ಕಲಿಸುವ ತರಗತಿಗಳು, ಕಾರ್ಯಾಗಾರಗಳು ನಗರಗಳಲ್ಲಿ ಮಾತ್ರವಲ್ಲ, ಸಣ್ಣ ಪೇಟೆಗಳಲ್ಲೂ ಈಗ ಜರುಗುತ್ತಿವೆ. ಆದರೆ, ಮನೋವಿಕಾಸ ಈ ಕಲೆ ದಕ್ಕಬೇಕಾಗಿರುವುದು ಶಿಕ್ಷಣದ ಮೂಲಕ ಹಾಗೂ ಕೌಟುಂಬಿಕ ಪರಿಸರದಲ್ಲಿ. ಶಿಕ್ಷಣದಲ್ಲಿ ನೈತಿಕತೆಯನ್ನು ಹೆಚ್ಚಿಸುವ ಜವಾಬ್ದಾರಿ ಸಮಾಜ ಮತ್ತು ಸರ್ಕಾರದ್ದಾಗಿದೆ. ಆದರೆ, ಆರೋಗ್ಯಕರ ಕೌಟುಂಬಿಕ ಪರಿಸರವನ್ನು ರೂಪಿಸುವ ಸಾಧ್ಯತೆ ಆಯಾ ಮನೆಗಳ ಹಿರಿಯರದೇ ಆಗಿದೆ. 'ನಮ್ಮ ಬದುಕಿನ ಸಾಧ್ಯತೆ ಹಾಗೂ ಸಾರ್ಥಕ್ಯ ಹಣಕಾಸಿನ ಮಾನದಂಡಗಳಿಗಷ್ಟೇ ಸೀಮಿತವಾಗಿಲ್ಲ' ಎನ್ನುವ ನಂಬಿಕೆಯನ್ನು ಎಂಥ ಕಠಿಣ ಸಂದರ್ಭದಲ್ಲೂ ಬಿಟ್ಟುಕೊಡದ ಆತ್ಮವಿಶ್ವಾಸ ಎಲ್ಲರದಾಗಬೇಕಿದೆ. ಇದರ ಜೊತೆಗೆ ಜನಸಾಮಾನ್ಯರ ಬಗ್ಗೆ ತೀರಾ ಕಟು ನಿಲುವು ತಾಳುವ ಹಣಕಾಸಿನ ಸಂಸ್ಥೆಗಳನ್ನು ಕೊಂಚ ಮಾನವೀಯಗೊಳಿಸುವ ಜರೂರು ಕೂಡಾ ಇದೆ.

■ ರಘುನಾಥ ಚ.ಹ.

